WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

# ಶ್ರೀ ಶಾರದಾ

ಮಾಸಪತ್ರಿಕೆ - 15 ಮೇ 2008

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.

*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (0), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-8 ಸಂಚಿಕೆ-5 ಪುಟಗಳು-8 Registered Under No.KA/SK/UDP/1260/2006-2008 Dated from 01-01-2006 to 31-12-2008.

## ಮಂಗಳೂರಲ್ಲಿ ಶತಮಾನೋತ್ಸವ ಸಮಾರೋಪದ ಉದ್ಘಾಟನೆ

# ದಯೆ-ಸಹಕಾರ ಮಾನವೀಯತೆಯ ಲಕ್ಷಣ - ಶ್ರೀ ಶ್ರೀ ಭಾರತೀತೀರ್ಥರು

''ರಾಕ್ಷಸರ ಉಪಟಳ ತಾಳಲಾರದೆ ದೇವತೆಗಳು, ಮಾನವರು ಬೊಬ್ಬಿರಿದು ಅಂಗಾಲಾಚಿದ ಸಮಯದಲ್ಲಿ ದಯೆ ಮತ್ತು ಸಹಕಾರ ಗುಣವನ್ನು ಮೈದಳೆದ ಪರಮಾತ್ಮನು ಯುಗ ಯುಗದಲ್ಲಿ ಬೇರೆ ಬೇರೆ ಅವತಾರ ತಾಳಿ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಕಾರ್ಯವನ್ನು ಮಾಡಿದ್ದಾಗಿದೆ. ಭಾರತೀಯ ಸನಾತನ ಧರ್ಮದಲ್ಲಿ ದಯೆ ಸಹಾಯ, ಪರೋಪಕಾರಕ್ಕೆ ಬಹಳಷ್ಟು ಮಹತ್ವವಿದೆ. ನಾವು ಈ ಕರ್ಮಭೂಮಿಯಲ್ಲಿ ಜನಿಸಿದ ಮೇಲೆ ಅಂತಹ ಗುಣಗಳನ್ನು ನಮ್ಮಲ್ಲಿ ಬೆಳೆಸಿಕೊಳ್ಳದಿದ್ದಲ್ಲಿ ಮನುಷ್ಯರಾಗಲು ಯೋಗ್ಯರಲ್ಲ'' ಎಂದು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ತಮ್ಮ ಭಾಷಣದಲ್ಲಿ ಹೇಳಿದರು.





ಅವರು ತಾ.11-05-2008ರಂದು ಮಂಗಳೂರಿನ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವ ಸಂಭ್ರಮದ ಸಮಾರೋಪಕ್ಕಾಗಿ ಮಂಗಳೂರಿಗೆ ಆಗಮಿಸಿ ಸೇರಿದ ಭಕ್ತ ಬಾಂಧವರಿಗೆ ಆಶೀರ್ವಚನ ನೀಡುತ್ತಾ ಈ ಮಾತನ್ನು ಹೇಳಿದರು. ''ಯಾವುದೇ ಸಂಘ-ಸಂಸ್ಥೆಗಳನ್ನು ಹುಟ್ಟುಹಾಕಿದ ಯಾವ ವ್ಯಕ್ತಿಗಳಿಗೂ ಸ್ವಾರ್ಥ ಇರುವುದಿಲ್ಲ. ದಯೆ, ಕರುಣೆ, ಸಹಕಾರ ಮುಂತಾದ ಆದರ್ಶ ಉದ್ದೇಶ ಹೊಂದಿ ಸಂಘ ಸಂಸ್ಥೆಗಳು ಹುಟ್ಟಿಕೊಳ್ಳುತ್ತವೆ. ನೂರು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಈ ಸುಬ್ರಹ್ಮಣ್ಯ ಸಭಾದ ಸ್ಥಾಪಕರಲ್ಲಿದ್ದ ಸದ್ಭಾವನೆಯಿಂದ ಇಂದು ಸನಾತನ ಧರ್ಮದ ಉಜ್ವಲ ಪರಂಪರೆ

(4ನೇ ಪುಟಕ್ಕೆ ...)

## ಪಡುಬಿದ್ರಿ ಉದಯಾದ್ರಿಯಲ್ಲಿ ಪ್ರತಿಷ್ಠೆ-ಬ್ರಹ್ಮಕಲಶಾಭಿಷೇಕ



ಸುಮಾರು 150 ವರ್ಷಗಳಷ್ಟು ಪುರಾತನ ಇತಿಹಾಸವಿರುವ ಶ್ರೀಕ್ಷೇತ್ರ ಉದಯಾದ್ರಿ ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಅಷ್ಟಮಂಗಲ ಪ್ರಶ್ನೆಯಲ್ಲಿ ತೋರಿದಂತೆ ಮಾಡಬೇಕಾದ ಧಾರ್ಮಿಕ ವಿಧಿಗಳನ್ನು ನಡೆಸಿ ಶ್ರೀ ಬಾಲಗಣಪತಿ ದೇವರ ಸುಂದರ ಷಟ್ಕೋನಾಕೃತಿಯ ವಾಸ್ತುಶಿಲ್ಪದ 28 ಅಡಿ ವಿಸ್ತಾರದ ಶಿಲಾಮಯ ಗರ್ಭಗುಡಿಯಲ್ಲಿ ಶ್ರೀ ಬಾಲಗಣಪತಿ ದೇವರನ್ನು ತಾ.28-04-2008ರಂದು ಪ್ರಾತಃಕಾಲದಲ್ಲಿ ಪ್ರತಿಷ್ಠಾಪಿಸಲಾಯಿತು. ತಾ.30-04-2008ರಂದು ಪ್ರತ್ಯೇಕ ಗುಡಿಯಲ್ಲಿ ಪ್ರಸನ್ನ ಪಾರ್ವತಿ ದೇವರ ಪ್ರತಿಷ್ಠೆಯೂ ನೆರವೇರಿತು.

ತಾ.01-05-2008ರಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಭಕ್ತಬಾಂಧವರ ಸದಾಶಯದೊಂದಿಗೆ ಶ್ರೀ ದೇವರಿಗೆ ಬ್ರಹ್ಮಕಲಶಾಭಿಷೇಕವೂ ನೆರವೇರಿತು. ಅಂದು ಮಧ್ಯಾಹ್ನ ನಡೆದ ಮಹಾ ಅನ್ನಸಂತರ್ಪಣೆಯಲ್ಲಿ ಸುಮಾರು 5,000ದಷ್ಟು ಭಕ್ತಬಾಂಧವರು ಶ್ರೀ ದೇವರ ಪ್ರಸಾದ ಸ್ವೀಕರಿಸಿದರು.

ತಾ.24-04-2008ರಂದು ಸಂಜೆ 4ಗಂಟೆಗೆ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವರ ಭವ್ಯ ಮೆರವಣಿಗೆಯು ವಿವಿಧ ಸಂಘ ಸಂಸ್ಥೆಗಳು ಹಾಗೂ ಭಕ್ತ ಬಾಂಧವರಿಂದ ಸಂಗ್ರಹಿಸಲಾದ ಹೊರೆಕಾಣಿಕೆಯ ಜೊತೆಗೆ ಪಡುಬಿದ್ರೆ ಶ್ರೀ ಗಣಪತಿ ದೇವಸ್ಥಾನದಿಂದ ಹೊರಟು ಶ್ರೀ ಕ್ಷೇತ್ರ ಉದಯಾದ್ರಿಗೆ ತಲುಪಿತು.

ತಾ.26ರ ಸಂಜೆ ಶ್ರೀ ದೇವತಾ ಪ್ರಾರ್ಥನೆ, ರಾಕ್ಷೋಘ್ನ, ವಾಸ್ತುಹೋಮ ಮೊದಲಾದ ವಿಧಿಗಳು ಪ್ರಾರಂಭಗೊಂಡು ನಂತರ ಪ್ರತಿದಿನವೂ ವಿವಿಧ ಧಾರ್ಮಿಕ ವಿಧಿಗಳು ನೆರವೇರಿದವು.

ಅಲ್ಲದೆ ಪ್ರತಿದಿನ ನಡೆದ ಧಾರ್ಮಿಕ ಸಭೆಗಳಲ್ಲಿ ಹಂಗಾರಕಟ್ಟೆ-ಬಾಳೆಕುದ್ರು ಶ್ರೀ ಮಠದ ಶ್ರೀ ಶ್ರೀನೃಸಿಂಹಾಶ್ರಮ ಮಹಾಸ್ವಾಮಿಗಳು, ಉಡುಪಿ ಶೀರೂರು ಮಠಾಧೀಶರಾದ ಶ್ರೀ ಶ್ರೀ ಲಕ್ಷ್ಮೀವರತೀರ್ಥ ಶ್ರೀ ಪಾದರು, ಕಾಸರಗೋಡು ಎಡನೀರು ಮಠಾಧೀಶರಾದ ಶ್ರೀ ಶ್ರೀ ಕೇಶವಾನಂದತೀರ್ಥ ಶ್ರೀ ಪಾದರು, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಒಡಿಯೂರು ಶ್ರೀ ಶ್ರೀ ದತ್ತ ಗುರುದೇವಾನಂದ ಸ್ವಾಮೀಜಿಯವರು ಆಗಮಿಸಿ ಆಶೀರ್ವಚನ ನೀಡಿದರು.

ಇದಲ್ಲದೆ ಪ್ರತಿದಿನ ಧಾರ್ಮಿಕ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು ವಿವಿಧ ಆಹ್ವಾನಿತ ಗಣ್ಯರ ಸಮ್ಮುಖದಲ್ಲಿ ನೆರವೇರಿದವು.

ಒಟ್ಟಿನಲ್ಲಿ ತಾ.24-04-2008ರಿಂದ ಪ್ರಾರಂಭಗೊಂಡು ತಾ.01-05-2008ರ ವರೆಗೆ ಪಡುಬಿದ್ರಿ ಶ್ರೀ ಉದಯಾದ್ರಿಕ್ಷೇತ್ರದಲ್ಲಿ ಸಂಭ್ರಮದ ವಾತಾವರಣವಿದ್ದು ಶ್ರೀ ಕ್ಷೇತ್ರಕ್ಕೆ ಆಸುಪಾಸಿನ ಭಕ್ತಬಾಂಧವರು ಮಾತ್ರವಲ್ಲದೆ ದೂರದ ಊರಿನಿಂದಲೂ ಭಕ್ತರು ಆಗಮಿಸಿ ಶ್ರೀ ದೇವರ ಪ್ರಸಾದ ಸ್ವೀಕರಿಸಿದರು.

(5ನೇ ಪುಟಕ್ಕೆ ...)

**ಶ್ರೀ ಕ್ಷೇತ್ರ ಉದಯಾದ್ರಿ, ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನದ ಇತಿಹಾಸ, ನಿರ್ಮಾಣದ ವಿವರ, ಗುಡಿಗೆ ಕಾಯಕಲ್ಪವಾದ ಪರಿ, ಬಾಲಗಣಪತಿಯ ಪ್ರತಿಷ್ಠೆ, ಅಷ್ಟಮಂಗಳ, ಜೀರ್ಣೋದ್ಧಾರ ಕೆಲಸದ ಪ್ರಗತಿ ಮತ್ತು ನಿಧಿಕುಂಭ ಸ್ಥಾಪನೆ ಮೊದಲಾದವುಗಳ ಬಗ್ಗೆ ಶ್ರೀ ಶಾರದಾ ಪತ್ರಿಕೆಯಲ್ಲಿ 2006 ಅಕ್ಟೋಬರ್, 2007 ಮಾರ್ಚ್, 2007 ಆಗಸ್ಟ್ ಸಂಚಿಕೆಗಳಲ್ಲಿ ಸಮಗ್ರವಾಗಿ ವಿವರಗಳನ್ನು ಕೊಡಲಾಗಿದೆ.**

## ''ದೇಶದ ಅಖಂಡತೆಗೆ ಶಂಕರಾಚಾರ್ಯರ ಕೊಡುಗೆಯು ಮಹತ್ವದ್ದಾಗಿದೆ'' - ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರು

## ಕುಂದಾಪುರದಲ್ಲಿ ಸಂಭ್ರಮದ ಶಂಕರ ಜಯಂತಿ ಉತ್ಸವ

''ಸನಾತನ ಹಿಂದೂ ಧರ್ಮ ಪುನರುದ್ಧಾರಗೊಳಿಸಲು ಸುಮಾರು 1200 ವರ್ಷಗಳ ಹಿಂದೆ ಧರೆಯಲ್ಲಿ ಜನಿಸಿದ ಶ್ರೀ ಶಂಕರಾಚಾರ್ಯರು ತಮ್ಮ ಅತ್ಯಲ್ಪ ಆಯುಷ್ಯದಲ್ಲಿ ತಮ್ಮಲ್ಲಿದ್ದ ಜ್ಞಾನ ಭಂಡಾರವನ್ನು ಎಲ್ಲೆಡೆ ಪಸರಿಸಿದರು. ನಾನಾ ಪ್ರಕಾರದ ಧಾರ್ಮಿಕ ಗ್ರಂಥಗಳನ್ನು ಬರೆದು ಸನಾತನ ಧರ್ಮವನ್ನು ಉಳಿಸುವಲ್ಲಿ ಬಹಳಷ್ಟು ಶ್ರಮಿಸಿದರು. ಯಾವುದೇ ಸಂಚಾರ ಸಾಧನಗಳಿಲ್ಲದ ಆ ಕಾಲದಲ್ಲಿ ಕೇವಲ ಕಾಲ್ನಡಿಗೆಯಲ್ಲಿಯೇ ದೇಶದ ಉದ್ದಗಲಗಳನ್ನು ಸಂಚರಿಸಿ ಭಾರತೀಯ ಧರ್ಮ ಪರಂಪರೆಯನ್ನು ಪ್ರಚುರಪಡಿಸಿದ ಮಹಾ ತಪಸ್ವಿಗಳವರು. ಇಂತಹ ಮಹಾತ್ಮರ ಕೊಡುಗೆಯನ್ನು ನೆನಪಿಸಿಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.'' ಎಂದು ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಅಭಿಪ್ರಾಯ ಪಟ್ಟರು.

ಅವರು ಕುಂದಾಪುರದ ಕುಂದೇಶ್ವರ ದೇವಳದಲ್ಲಿ ನಡೆದ ಶ್ರೀ ಶಂಕರಜಯಂತಿ ಉತ್ಸವದಲ್ಲಿ ಪಾಲ್ಗೊಂಡು ಉತ್ಸವ ಸಮಿತಿಯು ಏರ್ಪಡಿಸಿದ ಪೌರ ಸನ್ಮಾನವನ್ನು ಸ್ವೀಕರಿಸಿ ನೆರೆದ ಭಕ್ತಬಾಂಧವರಿಗೆ ಆಶೀರ್ವಾದ ಮಾಡುತ್ತಾ ಈ ಮಾತನ್ನು ಹೇಳಿದರು.

ತಾ.04-05-2008ರಂದು ಭಾನುವಾರ ಸಂಜೆ ಅಂಕೋಲದಿಂದ ಆಗಮಿಸಿ ಕುಂದಾಪುರದ ಶಾಸ್ತ್ರಿ ಸರ್ಕಲ್ ಬಳಿ ಪುರಪ್ರವೇಶ ಮಾಡಿದ ಶೃಂಗೇರಿ ಶ್ರೀಗಳನ್ನು ಕುಂದಾಪುರ ಸಮಸ್ತ ನಾಗರಿಕರು ಪೂರ್ಣ ಕುಂಭದೊಂದಿಗೆ ಬರಮಾಡಿಕೊಂಡರು. ವೈಭವದ ಮೆರವಣಿಗೆಯಲ್ಲಿ ಭೂತನರ್ತನ, ಬೊಂಬೆ ನರ್ತನ, ನಾಸಿಕ್ ಬ್ಯಾಂಡ್, ವಾದ್ಯ, ಚೆಂಡೆ ವಾದನ, ವಿವಿಧ ಭಜನಾ ತಂಡಗಳು ಹಾಗೂ ಬೇರೆ ಬೇರೆ ನೃತ್ಯ ಪ್ರಾಕಾರಗಳು ಜನರ ಗಮನ ಸೆಳೆದವು.

ಶ್ರೀ ಕುಂದೇಶ್ವರ ದೇವಳಕ್ಕೆ ಆಗಮಿಸಿದ ಶ್ರೀ ಶ್ರೀಗಳಿಗೆ ಧೂಳಿಪಾದಪೂಜೆ, ನಡೆದು ನಂತರ ಪೌರ ಸನ್ಮಾನ ನೆರವೇರಿತು. ಪುರದ ಸಮಸ್ತ ಜನತೆಯ ಪರವಾಗಿ ಕುಂದಾಪುರ ಪುರಸಭಾಧ್ಯಕ್ಷ ಶ್ರೀ ಮೋಹನದಾಸ ಶೆಣೈ, ಶ್ರೀ ಶ್ರೀಗಳಿಗೆ ಭಿನ್ನವತ್ತಳೆ, ಫಲಪುಷ್ಪ ಸಮರ್ಪಿಸಿದರು. ತಾ.04ರಿಂದ 10ರವರೆಗೆ ಶ್ರೀ ಶ್ರೀಗಳು ಕುಂದಾಪುರದಲ್ಲಿ ವಾಸ್ತವ್ಯವಿದ್ದು ಪ್ರತಿದಿನ ಧಾರ್ಮಿಕ ಸಮಾರಂಭದಲ್ಲಿ ಪಾಲ್ಗೊಂಡು ಭಕ್ತಬಾಂಧವರನ್ನು ಉದ್ದೇಶಿಸಿ ಅನುಗ್ರಹ ಭಾಷಣ ಮಾಡಿದರು.

ಪ್ರತಿದಿನ ನಡೆದ ಶ್ರೀ ಶಾರದಾ ಚಂದ್ರ ಮೌಳೀಶ್ವರ ಪೂಜೆಯಲ್ಲಿ ಸಹಸ್ರಾರು

(5ನೇ ಪುಟಕ್ಕೆ ...)

